/

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕೋರಮಂಗಲ ಉಪ-ವಿಭಾಗದ, ಈಜೀಪುರ ವಾರ್ಡ್ ಸಂಖ್ಯೆ-148 ದಿನಾಂಕ:30-10-2021 ರಂದು ಅಕ್ಟೋಬರ್-2021 ರ ವಾರ್ಡ್ ಸಮಿತಿಯ ಮಾಸಿಕ ಸಭೆಯ ನಡವಳಿಗಳು**

ಡಾ॥ ಅಶೋಕ್ ಡಿ.ಆರ್, ಜಂಟಿ ಆಯುಕ್ತರು (ಯಲಹಂಕ) ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 148ರ ರವರ ಅಧ್ಯಕ್ಷತೆಯಲ್ಲಿ ಬಿ.ಬಿ.ಎಂ.ಪಿ ಕಛೇರಿ, **Hot mix plant, 80 feet road,** ಈಜೀಪುರ, ಬೆಂಗಳೂರು ರಲ್ಲಿ ದಿನಾಂಕ:30.10.2021 ರಂದು ಬೆಳಗ್ಗೆ 9.30 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದವರು:-**

1. ಶ್ರೀ ಶ್ರೀ ರಾಜೇಂದ್ರ ಬಾಬು
2. ಶ್ರೀ ಲಕ್ಷ್ಮೀಪತಿ
3. ಶ್ರೀ ಎನ್. ರಾಮಚಂದ್ರಪ್ಪ
4. ಶ್ರೀ ಪ್ರಕಾಶ್ ರೆಡ್ಡಿ
5. ಶ್ರೀ ಶ್ರೀರಾಮ್
6. ಕುಮಾರಿ ಕಲ್ಯೆ ಸೆಲ್ವಿ .ಡಿ
7. ಶ್ರೀ ಎಂ.ಎಸ್. ಗಣೇಶ್

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ಪ್ರದೀಪ್ ಕುಮಾರ್, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್-148 ಈಜೀಪುರ
2. ಶ್ರೀ ಎ. ಕುಮಾರವೇಲು, ಹಿರಿಯ ಆರೋಗ್ಯ ನಿರೀಕ್ಷಕರು
3. ಶ್ರೀ ಟಿ.ಎಸ್. ಮುತ್ತುರಾಜ, ಕಿರಿಯ ಆರೋಗ್ಯ ನಿರೀಕ್ಷಕರು
4. ಶೀ ಎನ್. ನಾಗರಾಜ್, ದ್ವಿ.ದ.ಸ., ಬಿ.ಬಿ.ಎಂ.ಪಿ
5. ಶ್ರೀ ಯಶವಂತ್ ಹೆಚ್.ಜಿ., ಬಿ.ಬಿ.ಎಂ.ಪಿ. ಮಾರ್ಷಲ್

* * * * *

ಡಾ॥ ಅಶೋಕ್ ಡಿ.ಆರ್, ಜಂಟಿ ಆಯುಕ್ತರು (ಯಲಹಂಕ) ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 148 ರವರು ಸಭೆಗೆ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಹಾಗೂ ಹಾಲಿ ಮಳೆ ಬೀಳುತ್ತಿರುವ ಸಂದರ್ಭದಲ್ಲಿ ಬರುವಂತಹ ದೂರುಗಳನ್ನು ಮತ್ತು ವಾರ್ಡ್ ಅನ್ನು ರಸ್ತೆಗುಂಡಿ ಮುಕ್ತಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಿಸಿದ ಇಲಾಖೆಗಳಿಗೆ ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ವಾರ್ಡ್‌ಗೆ ಸಂಬಂಧಪಟ್ಟ ಕುಂದುಕೊರತೆಗಳನ್ನು ಚರ್ಚಿಸುವಂತೆ ತಿಳಿಸಿದರು.

ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆಗುಂಡಿಗಳನ್ನು ಆಗ್ಗಿಂದಾಗೆ ಮುಚ್ಚುತ್ತಿದ್ದು, ಮಳೆಗೆ ಸಂಬಂಧಿಸಿದಂತೆ ಬಂದಂತಹ ದೂರುಗಳನ್ನು ಕೂಡಲೇ ಸ್ಪಂದಿಸಿ, ಅಗತ್ಯ ಕ್ರಮ ಕೈಗೊಳ್ಳುತ್ತಿರುವುದಾಗಿ ವಾರ್ಡ್‌ನ ಸಹಾಯಕ ಅಭಿಯಂತರರುಗಳು ಸಭೆಯಲ್ಲಿ ತಿಳಿಸಿರುತ್ತಾರೆ.



Scanned by CamScanner

ಡಾ॥ ಅಶೋಕ್ ಡಿ.ಆರ್, ಜಂಟಿ ಆಯುಕ್ತರು (ಯಲಹಂಕ) ಮತ್ತು ನೋಡಲ್ ಅಧಿಕಾರಿಗಳು ಮಾತನಾಡಿ, ಘನತ್ಯಾಜ್ಯ ವಿಷಯಕ್ಕೆ ಸಂಬಂಧಿಸಿದಂತೆ, ಮೂಲದಲ್ಲಿಯೇ ಕಸವನ್ನು ಬೇರ್ಪಡಿಸಿ, ಕಸವನ್ನು ಸಂಗ್ರಹಿಸಲು ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಅಗತ್ಯವಿದ್ದಲ್ಲಿ ಬೇರ್ಪಡಿಸದೆ ಕಸವನ್ನು ಎಸೆಯುವವರ ವಿರುದ್ಧ ದಂಡವನ್ನು ವಿಧಿಸುವ ಮೂಲಕ ಹಾಗೂ ಮನೆ ಮನೆ ಕಸಗಳನ್ನು ಹಸಿಕಸ ಮತ್ತು ಒಣಕಸಗಳನ್ನು ಯಾವ ದಿನಗಳಂದು ಸಂಗ್ರಹಿಸಲಾಗುವುದು ಎಂದು ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಕ್ರಮವಹಿಸಲು ಘನತ್ಯಾಜ್ಯ ನಿರ್ವಹಣಾ ವಿಭಾಗಕ್ಕೆ ತಿಳಿಸಿದರು.

ವಾರ್ಡ್ ವ್ಯಾಪ್ತಿಯಲ್ಲಿ ಒಣಕಸ ಸಂಗ್ರಹಣ ಕೇಂದ್ರವನ್ನು ತೆರೆಯಲಾಗಿದ್ದು, ಇದನ್ನು ಸೂಕ್ತ ರೀತಿಯಲ್ಲಿ ಸಜ್ಜುಗೊಳಿಸಲು ಹಾಗೂ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,**
**ಘನತ್ಯಾಜ್ಯ ನಿರ್ವಹಣೆ ವಿಭಾಗ**

ಈಜೀಪುರ ಸರ್ಕಲ್‌ನಿಂದ ಶ್ರೀರಾಮ ದೇವಸ್ಥಾನದ ರಸ್ತೆಯಲ್ಲಿ ಎರಡೂ ಬದಿಗಳಲ್ಲಿ ತಳ್ಳುವ ಗಾಡಿಗಳನ್ನು ರಸ್ತೆಯ ಎರಡೂ ಬದಿಯಲ್ಲಿ ಗಾಡಿಗಳನ್ನು ನಿಲ್ಲಿಸಿ ವ್ಯಾಪಾರ ಮಾಡುತ್ತಿರುವುದರಿಂದ ಗ್ರಾಹಕರು ರಸ್ತೆ ಬದಿಯಲ್ಲಿರುವ ಗಾಡಿಗಳಲ್ಲಿ ವಹಿವಾಟು ಮಾಡಲು ವಾಹನಗಳನ್ನು ನಿಲ್ಲಿಸುವುದರಿಂದ ರಸ್ತೆಯಲ್ಲಿ ಇತರೆ ವಾಹನಗಳ ಸುಗುಮ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ಇದರಿಂದಾಗಿ ರಸ್ತೆಯ ಉದ್ದಕ್ಕೂ ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿರುತ್ತದೆ. ಆದುದರಿಂದ ಈ ಬಗ್ಗೆ ಕ್ರಮ ವಹಿಸಲು ಜಂಟಿಯಾಗಿ ಇಂಜಿನಿಯರ್ ವಿಭಾಗ ಮತ್ತು ಟ್ರಾಫಿಕ್ ಪೊಲೀಸ್ ಹಾಗೂ ಘನತ್ಯಾಜ್ಯ ವಿಭಾಗರವರು ಅಗತ್ಯವಾದ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

**ಕ್ರಮ: ಸ.ಕ.ಪಾ.ಅ, ಘನತ್ಯಾಜ್ಯ ನಿರ್ವಹಣೆ ವಿಭಾಗ**
**ಕ್ರಮ: ಸ.ಕ.ಪಾ.ಅ, ಕಾಮಗಾರಿ ವಿಭಾಗ**
**ಕ್ರಮ: ಸಂಚಾರ ಪೊಲೀಸ್ ಠಾಣೆ, ಅಶೋಕನಗರ**

ಫೇರ್‌ಲ್ಯಾಂಡ್ ಬಳಿ ಬೃಹತ್ ಮಳೆನೀರುಗಾಲುವೆಗೆ ಅಡ್ಡಲಾಗಿ ಸೇತುವೆ/ಕಲ್ವರ್ಟ್ ಕಾಮಗಾರಿಯನ್ನು ನಿರ್ವಹಿಸಲು ಅಗತ್ಯವಿರುವ ಬದಲಿ ಮಾರ್ಗ ವ್ಯವಸ್ಥೆಯನ್ನು ಕೈಗೊಳ್ಳಲು ಸಹಾಯಕ ಪೋಲಿಸ್ ಆಯುಕ್ತರು, ಸಂಚಾರ ವಿಭಾಗ, ಅಶೋಕ ನಗರ ರವರಿಗೆ ದೂರವಾಣಿ ಮುಖಾಂತರ ಮಾತನಾಡಿ, ಸದರಿಯವರು ಸೂಚಿಸಿರುವಂತೆ ಕಾರ್ಯಪಾಲಕ ಅಭಿಯಂತರರು, ಬೃಹತ್ ಮಳೆನೀರುಗಾಲುವೆ ರವರು ಜಂಟಿ ಪೋಲಿಸ್ ಆಯುಕ್ತರು, ಸಂಚಾರ ವಿಭಾಗ, ರವರಿಗೆ ಪ್ರಸ್ತಾವನೆಯನ್ನು ಸಲ್ಲಿಸಿದಲ್ಲಿ, ಸದರಿ ಪ್ರಸ್ತಾವನೆಗೆ ಅನುಮೋದನೆಗೆ ಪರಿಗಣಿಸುವುದಾಗಿ ತಿಳಿಸಿರುತ್ತಾರೆ. ಅದರಂತೆ, ಬದಲಿ ಮಾರ್ಗದ ವ್ಯವಸ್ಥೆಯನ್ನು ಕಲ್ಪಿಸಲು ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಲಾಗಿದ್ದು, ಇದೂವರೆಗೂ ಸದರಿ ತುರ್ತು ಕಾಮಗಾರಿಯನ್ನು ಬೃಹತ್ ಮಳೆನೀರುಗಾಲುವೆ (ಎಸ್.ಡಬ್ಲ್ಯೂ.ಡಿ.) ವಿಭಾಗರವರು ಕೈಗೆತ್ತಿಗೊಂಡಿರುವುದಿಲ್ಲ. ಪ್ರಸ್ತುತ ಕಲ್ವರ್ಟ್ ಬ್ರಿಡ್ಜ್ ಶಿಥಿಲಗೊಂಡಿದ್ದು, ರಸ್ತೆಯ ಎರಡೂ ಬದಿಯಲ್ಲಿ ಅಬಾರ್ಟಿಂಗ್ ವಾಲ್ ಮತ್ತು ಪ್ಯಾರಾಪೆಟ್ ವಾಲ್‌ಗಳು (ತಡೆಗೋಡೆ) ಇಲ್ಲದೆ ರಾತ್ರಿ ವೇಳೆಯಲ್ಲಿ ಸಂಚರಿಸುವುದು ತೀವ್ರ ಅಪಾಯಕಾರಿಯಾಗಿದ್ದು, ಈ ಬಗ್ಗೆ ಬೃಹತ್ ಮಳೆನೀರುಗಾಲುವೆ (ಎಸ್.ಡಬ್ಲ್ಯೂ.ಡಿ.) ವಿಭಾಗಕ್ಕೆ ಕಾಮಗಾರಿಯ ಕೋರಮಂಗಲ ಉಪ ವಿಭಾಗದಿಂದ ದಿನಾಂಕ:06.09.2021 ರಂದು ಪತ್ರ ಬರೆಯಲಾಗಿದ್ದರೂ ಇದೂವರೆಗೂ ಕಾಮಗಾರಿಯನ್ನು ಪ್ರಾರಂಭಿಸಿಲ್ಲದಿರುವುದರಿಂದ, ಆದಕಾರಣ ಬಿ.ಬಿ.ಎಂ.ಪಿ. ಕೋರಮಂಗಲ ಉಪವಿಭಾಗದ ವತಿಯಿಂದ ಕಾಮಗಾರಿಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲು ಸೂಚಿಸಲಾಯಿತು.

**ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,**
**ಬೃಹತ್ ಮಳೆನೀರುಗಾಲುವೆ ವಿಭಾಗ**



Scanned by CamScanner

20ನೇ 'ಸಿ' ಅಡ್ಡರಸ್ತೆಯಲ್ಲಿ ಅಳವಡಿಸಿರುವ ಕುಡಿಯುವ ನೀರಿನ ಸಂಪರ್ಕದ ಕೊಳವೆಗಳು ಹಾಳಾಗಿದ್ದು, ಹೊಸದಾಗಿ ಸಂಪರ್ಕ ಕೊಳವೆಗಳನ್ನು ಅಳವಡಿಸಿಕೊಡಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಕೋರಲಾಯಿತು.

ಈಜೀಪುರ ವಾರ್ಡ್‌ನಲ್ಲಿ 2021-22ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ರೂ.60.00 ಲಕ್ಷಗಳ ಅನುದಾನವನ್ನು ನೀಡಲಾಗಿದ್ದು, ರೂ.60.00 ಲಕ್ಷಗಳ ಅನುದಾನದ ಮೊತ್ತಕ್ಕೆ ಈ ಕೆಳಕಂಡಂತೆ ಕಾಮಗಾರಿಯನ್ನು ನಿರ್ವಹಿಸಲು ಸಭೆಯಲ್ಲಿ ಚರ್ಚಿಸಿ, ತೀರ್ಮಾನಿಸಿ ಅನುಮೋದನೆಯನ್ನು ಪಡೆಯಲಾಯಿತು.

| Sl. No | Name of Work | Amount (Rs. in Lakhs) |
|---|---|---|
| 1 | Filling up of Potholes in Ward Jurisdiction in ward no.148 Ejipura | 20.00 |
| 2 | Maintainance of footpath drain and Re-asphalting of damaged roads in ward Jurisdiction in ward No.148 Ejipura | 20.00 |
| 3 | Annual Maintenance of Borewell & Water supply lines in ward Jurisdiction ward No.148 Ejipura | 20.00 |

ಕೊನೆಯದಾಗಿ, ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಾಗಿದ್ದ ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಅನುಷ್ಠಾನ ವರದಿಯೊಂದಿಗೆ ಮುಂದಿನ ಸಭೆಗೆ ಹಾಜರಾಗಿ ಮಾಹಿತಿ ಒದಗಿಸಲು ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

30/10/2021

(ಪ್ರದೀಪ್ ಕುಮಾರ್ .ಆರ್)
ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು,
ವಾರ್ಡ್-148 ಈಜೀಪುರ



Scanned by CamScanner